# INTEGRATED RESEARCH JOURNAL OF MANAGEMENT, SCIENCE AND INNOVATION

ISSN 2582-5445

*An Internationally Indexed Peer Reviewed & Refereed Journal*

www.IRJMSI.com
www.isarasolutions.com

Published by iSaRa Solutions

# The revelation of female identity in the novel Krishne Haradunu

**Dr. Shivalingappa I. Bhandari**
Associate Professor of Kannada
G. P. Porwal Arts, Commerce And V. V. S. Science College, Sindagi-586-128 Vijayapur

Abstract

The novel, which introduces the various aspects of human life, makes it clear that the woman in the novel, endures injustice, tyranny, violence, pain, and suffering and lives as a challenge to problems. Talking about the unfolding of women's identity in the novel Krishna Haradunu, the novel depicts the diverse lives of women from different backgrounds. As the novelist says, 'This is not just a story, this is the story of the real life of those who lived and survived on earth': Throughout the novel, like Krishna and the water-makers, the burden of the water is heavy. Like Krishna, women have a strong devotion to women. Life should flow without stopping. Whatever comes, one should swim. One should conquer it. One should live by cultivating the love of life. This novel conveys the hope that this

## ಕೃಷ್ಣೆ ಹರಿದಳು ಕಾದಂಬರಿಯಲ್ಲಿ ಮಹಿಳಾ ಅಸ್ಮಿತೆಯ ಅನಾವರಣ

ಡಾ. ಶಿವಲಿಂಗಪ್ಪ ಆಯ್. ಭಂಡಾರಿ

ಕನ್ನಡ ಸಾಹಿತ್ಯ ಕ್ಷೇತ್ರದ ವ್ಯಾಪ್ತಿ ಬಹಳ ವಿಸ್ತಾರವಾಗಿದೆ. ಇದರ ಒಂದು ಅಂಗವಾಗಿ ಬೆಳೆದು ಬಂದ ಕಾದಂಬರಿ ಪ್ರಕಾರ ಬಹುಬೇಗ ಓದುಗರ ಮನಸ್ಸನ್ನು ಗೆದ್ದು, 'ಅಂಗೈ ರಂಗಭೂಮಿ' ಎಂದು ಪ್ರಖ್ಯಾತಿಯನ್ನು ಪಡೆದಿರುವ ಕಾದಂಬರಿ ಪ್ರಕಾರ ಜನಮಾನಸದಲ್ಲಿ ಹಸಿರಾಗಿ, ಉಸಿರಾಗಿ ಬಹು ದೊಡ್ಡ ಮಟ್ಟದಲ್ಲಿ ಬೆಳೆದು ನಿಂತಿದೆ. ಹೀಗೆ ಬೆಳೆದು ನಿಂತಿರುವುದಕ್ಕೆ ಪ್ರಮುಖ ಕಾರಣ, ಮಾನವ ಬದುಕಿನ ಆಳ–ಅಗಲಗಳನ್ನು, ಎತ್ತರ–ಬಿತ್ತರಗಳನ್ನು ಒಳಗೊಂಡ ಜೀವನದ ಕಥೆ. ಮಾನವ ಬದುಕಿನ ವಿವಿಧ ಮೊಗ್ಗಲುಗಳನ್ನು ಪರಿಚಯಿಸುವ ಕಾದಂಬರಿ ಪ್ರಕಾರಕ್ಕೆ ಲೇಖಕರ ಕೊಡುಗೆ ಅಪಾರವು ಮತ್ತು ಅನನ್ಯವೂ ಆಗಿದೆ. ಅಂತವರ ಸಾಲಿನಲ್ಲಿ ಉತ್ತರ ಕರ್ನಾಟಕದ ಬಿರು–ಬಿಸಿಲಿಗೆ ಮೈಯೊಡ್ಡಿ ಬದುಕಿನ ಅಂತಃಸತ್ವವನ್ನು ಸೃಜನಶೀಲವಾಗಿಸಿಕೊಂಡು ಹೆಸರು ಮಾಡಿದ ಗೀತ ನಾಗಭೂಷಣ್, ಚೆನ್ನಣ್ಣ ವಾಲೀಕಾರ, ಕುಂ. ವೀರಭದ್ರಪ್ಪ ಇವರ ಸಾಲಿನಲ್ಲಿ ನಿಂತಿರುವರಲ್ಲಿ ಕಾದಂಬರಿಕಾರ ಡಾ. ಬಾಳಾ ಸಾಬ ಲೋಕಪೂರ್ ಒಬ್ಬರು. ಈಗಾಗಲೇ ಕಾದಂಬರಿಗಳನ್ನು ಬರೆದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಡಾ. ಬಾಳಾಸಾಬ ಲೋಕಾಪುರ ಅವರ ಕೃಷ್ಣೆ ಹರಿದಳು ಕಾದಂಬರಿ ಕೃಷ್ಣೆಯ ಪಾದ ಸ್ಪರ್ಶ ಮಾಡಿ ನಿತ್ಯದ ಬದುಕಿಗೆ ಮುಖ ಮಾಡಿರುವ ಶಿರಹಾಡಿ ಗ್ರಾಮ ಕೇಂದ್ರ ಬಿಂದುವಾಗಿದೆ. ಸ್ವಾತಂತ್ರ್ಯ ಪಡೆದುಕೊಂಡ ಖುಷಿಯ ಸಂದರ್ಭದಲ್ಲಿ ಗೌಡಿಕೆಯ ವಾಡೆ ಮತ್ತು ದೇಶ ಗತಿ ಎಂಬ ಪಾಳೆಗಾರಿಕೆ ಹಿಡಿತದಿಂದ ಆಧುನಿಕರಣದ ಬೆಳಕಲ್ಲಿ ಗ್ರಾಮೀಣ ಜನರ ಜೀವನ ಸಂಬಂಧಗಳು ಕೃಷ್ಣಾ ನದಿಯಂತೆ ಪ್ರವಾಹವಾಗಿ ಹರಿದಿವೆ. ಈ ಕಾದಂಬರಿಯಲ್ಲಿ ಬರುವ ಶಿರಹಾಡಿ ಗ್ರಾಮದ ಬದುಕು ಇಡೀ ಜಗತ್ತಿನ ಸಮಸ್ತ ಗ್ರಾಮಗಳ ಪ್ರತಿಬಿಂಬವಾಗಿ ಕಂಡುಬರುವಂತೆ, ಸಮಸ್ತ ಗ್ರಾಮಗಳ ಮಹಿಳೆಯರ ಬದುಕಿನ ಚಿತ್ರಣವೂ ಹೌದು. ಕುಟುಂಬ, ಮಹಿಳೆ ಮತ್ತು ಗ್ರಾಮ ಇವು ಮೂರು ಸಾಮಾಜದ ಪ್ರಮುಖ ಅಂಗಗಳು.(ಮಹಿಳೆಯಿಲ್ಲದ ಕುಟುಂಬವಿಲ್ಲ ಹಾಗಯೇ ಗ್ರಾಮಗಳಿಲ್ಲದೆ ಸಮಾಜ ಇಲ್ಲ.) ಈ ಮೂರನ್ನು ಮುಪ್ಪುರಿಗೊಂಡ ಕಾದಂಬರಿ ರಚನೆ ಓದುಗರ ಮನಸ್ಸನ್ನು ತನ್ನೆಡೆಗೆ ಸೆಳೆದುಕೊಳ್ಳುವಲ್ಲಿ ಯಶಸ್ಸನ್ನು ಕಂಡಿದೆ. ಈ ಕಾದಂಬರಿಗೆ ಬೆನ್ನುಡಿಯಲ್ಲಿ ಪ್ರೊ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಗುರುತಿಸಿರುವಂತೆ : "ಭೂಮಿ ಮತ್ತು ಹೆಣ್ಣು

ತೀವ್ರ ಆತಕ್ರಮಣಕ್ಕೆ ಒಳಗಾಗುತ್ತಿರುವ ನಮ್ಮ ಕಾಲದ ಸಾಮಾಜಿಕ ರಚನೆಯನ್ನು ಈ ಕೃತಿ ಸೃಜನಶೀಲ ನೆಲೆಯಲ್ಲಿ ವಿಶ್ಲೇಷಿಸಲು ಪ್ರಯ್ನಿಸುತ್ತದೆ ಎಂದು ಹೇಳುತ್ತಲೇ ಮುಂದುವರೆದು ಸ್ತ್ರೀ ಚೈತನ್ಯ ಕಾದಂಬರಿಯ ಜೀವಸೆಲೆ"(ಕಾದಂಬರಿಯ ಬೆನ್ನುಡಿ) ಎಂದಿರುವಂತೆ ಇಡೀ ಕಾದಂಬರಿಯುದ್ದಕ್ಕೂ ಸ್ತ್ರೀ ಅನ್ಯಾಯ, ಅತ್ಯಾಚಾರ, ಹಿಂಸೆ, ನೋವು, ಯಾತನೆಗಳೆಲ್ಲವನ್ನು ಸಹಿಸಿಕೊಂಡು ಈ ಸಮಸ್ಸೆಗಳಿಗೆ ಸವಾಲಾಗಿ ಬದುಕಿದ್ದನ್ನು ಕಾದಂಬರಿ ಸ್ಪಷ್ಟ ಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಕೃಷ್ಣೆ ಹರಿದಳು ಕಾದಂಬರಿಯಲ್ಲಿ ಮಹಿಳಾ ಅಸ್ಮಿತೆ ಹೇಗೆ ಅನಾವರಣಗೊಂಡಿದೆ ಎಂಬುದನ್ನು ಗುರುತಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಈ ಕಾದಂಬರಿಯನ್ನು ಅವಲೋಕನ ಮಾಡಿದರೆ ಇಲ್ಲಿಯ ಬಹುಸಂಖ್ಯಾತ ಮಹಿಳೆಯರು ಅನಕ್ಷರಸ್ತವೇ ಇವರೆಲ್ಲರೂ ಮಣ್ಣನ್ನು ಮತ್ತು ತಮ್ಮ ತೋಳ್ಬಲದ ಶ್ರಮವನ್ನು ನಂಬಿಯೆ ಬದುಕಿರುವರು. ಈ ಶ್ರಮಕ್ಕೆ ಹೊರತಾಗಿ ಉಳಿದ ಪಾಳೆಗಾರಿಕೆಯ ವಂಶಸ್ಥ ಗುರುಪಾದಪ್ಪ ಗೌಡನ ಹೆಂಡತಿ ಲಾಯರ್(ಕಾನೂನು ಪದವಿ)ಓದಿದ್ದರೆ, ಅಣ್ಣ ದೇಸಾಯಿಯ ಹೆಂಡತಿ ಸುಮಿತ್ರಾಸಾಯಿ, ಗಾಣಿಗೇರಾ ಇಂದಿರಾಬಾಯಿ ಮಗಳು ಕಸ್ತೂರಿ ಅಕ್ಷರ ಜ್ಞಾನವನ್ನು ಪಡೆದುಕೊಂಡವರು. ಈ ಮೂವರನ್ನು ಹೊರತುಪಡಿಸಿದರೆ ಪ್ರತಿಭಟನೆಯ ಹೆಜ್ಜೆ ಇಟ್ಟಂತೆ ಕಂಡುಬರುವ ಒಂದೇ ಒಂದು ಪಾತ್ರ, ಮಾದರ್ರ ಯಮುನಪ್ಪನ ಮೊಮ್ಮಗಳು ಗೌರಿ. ಶತಮಾನಗಳಿಂದ ಅಕ್ಷರ ಎಂದರೆ ಏನೆಂಬುದನ್ನು ಅರಿಯಲಾಗದ ಮಾದರ ಯಮುನಪ್ಪನ ಮೊಮ್ಮಗಳು ಗೌರಿ ಪದವೀಧರೆಯಾಗಿ ನವ ನಾಗರಿಕತೆಯ ಬೆಳದಿಂಗಳ ಹೊಸ್ತಿಲಲ್ಲಿ ನಿಂತು ಜಾತಿಯ ಬೇರುಗಳನ್ನು ಕಿತ್ತೆಸೆದು ಗೌಡರ ವಾಡೆಯ ವಾರಸುದಾರಳಾಗುವಳು.

ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಗೌಡರ ವಾಡೆ ಮತ್ತು ದೇಶಗತಿ ಮನೆತನಗಳು ದರ್ಪ, ದೌರ್ಜನ್ಯದ ತವರುಗಳಾಗಿದ್ದುವು. ಕ್ರೌರ್ಯದ ಸಂಖೇತಗಳಾಗಿದ್ದ ವಾಡೆಗಳು ಇಡೀ ಊರಿನ ಜನರನ್ನು ಗುಲಾಮರಂತೆ ನಡೆಸಿಕೊಂಡಿದ್ದುದಕ್ಕೆ ಕಾದಂಬರಿಲ್ಲಿ ದಾಖಲಿಸಲಾದ ವಾಡೆಯ ಮನೆತನದ ಗುಣಗಳೇ ಸಾಕ್ಷಿಯನ್ನೊದಗಿಸುತ್ತವೆ. ಭೂಮಿ ಮತ್ತು ಹೆಣ್ಣನ್ನು ತಮ್ಮ ಆಸ್ತಿಯ ಮೇಲಿನ ಹಕ್ಕು ಎಂಬಂತೆ ಅಧಿಕಾರ ಚಲಾಯಿಸುತ್ತಿದ್ದರೆಂಬುದಕ್ಕೆ ಭಾರತೀಯ ಚರಿತ್ರೆ ಸಾಕ್ಷಿಯನ್ನು ಒದಗಿಸುತ್ತದೆ. ಕಾದಂಬರಿಕಾರ ಅರ್ಥೈಸಿದಂತೆ ಶಿರಹಾಡಿಯ ಭೂಮಿ ಮತ್ತು ಹೆಣ್ಣು ಪಾಳೆಗಾರಿಕೆ ಹಿಡಿತಕ್ಕೆ ಬಲಿಯಾಗಿ ಶೀಲವನ್ನು ಕಳೆದುಕೊಂಡರೆ, ತಮಗಾದ ಅನ್ಯಾಯಕ್ಕೆ ಪ್ರತಿಯಾಗಿ ಮಹಿಳೆ ಸೇಡು ತೀರಿಸಿಕೊಳ್ಳುವಂತೆ ಚಿತ್ರಣಗೊಂಡಿದ್ದಾಳೆ. ಶಿರಹಾಯಲ್ಲಿ ಮನೆ ಮುರುಕುತನ ಮತ್ತು ಕಚ್ಚೆ ಹರುಕು ಗುಣವುಳ್ಳ ಅಣ್ಣ ದೇಸಾಯಿ ಇವನಿಗೆ ಬೆಂಬಲಿಗರಾಗಿ ಗೋಪಾಲರಾವ್ ಕುಲಕರ್ಣಿ ಮತ್ತು ಸರಪಂಚ್ ಮಹದೇವಪ್ಪ ನಂತರ ಶಿರಹಾಡಿಗೆ ಬಂದು ಸೇರಿಕೊಂಡ ರಾಕೇಶ್ ಈ ದೇಸಾಯಿ ಇವರುಗಳಿಂದಾಗಿ ಶಿರಹಾಡಿ ಅದಃಪತನದ ಹಾದಿ ಹಿಡಿದು, ಸಂತೃಪ್ತ ಮನಸ್ಸುಗಳಿಗೆ ಆಘಾತವನ್ನುಂಟು ಮಾಡಿದೆ. ಆದರೆ ಇದೆಲ್ಲದಕ್ಕೂ ಹೊರತಾಗಿಯೇ ಬದುಕಿದ ಶಿರಹಾಡಿಯ ಸಂರಕ್ಷಣೆಯ ಭಾರವನ್ನು ಹೊತ್ತುಕೊಂಡು ತನ್ನ ವ್ಯಕ್ತಿತ್ವ, ಘನತೆ ಮತ್ತು ಗೌರವಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸದಾ ಚಿಂತಿತನಾಗಿ ಶ್ರಮಿಸಿದವನು ಗುರುಪಾದಪ್ಪಗೌಡ.

ಈ ಕಾದಂಬರಿಯಲ್ಲಿ ಬರುವ ಮಹಿಳಾ ಜೀವನವನ್ನು ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳಿಗೆ ಅನುಗುಣವಾಗಿ ಮೂರು ವರ್ಷಗಳನ್ನಾಗಿ ವಿಂಗಡಿಸಲಾಗಿದೆ.

- ಪರಂಪರೆಯನ್ನು ಒಪ್ಪಿ ಬದುಕು ಸವೆಸಿದ ಶ್ರೀಮಂತ ಮಹಿಳೆಯರು
- ಪರಂಪರೆಯನ್ನು ಒಪ್ಪಿಕೊಂಡು ತಮ್ಮ ಶೀಲವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪ್ರತಿಭಟಿಸುವ ಮಧ್ಯಮ ವರ್ಗದ ಮಹಿಳೆಯರು
- ಹೊಟ್ಟೆ–ಬಟ್ಟೆಯನ್ನು ಕಟ್ಟಿಕೊಳ್ಳುವುದಕ್ಕಾಗಿ ಪರದಾಡುವ ಕೆಳವರ್ಗದ ಕನ್ಯಾಮಣಿಗಳು

**ಮೇಲ್ವರ್ಗದ(ಶ್ರೀಮಂತ)ಮಹಿಳೆಯರು :**

ಶಿರಹಾಡಿಯ ಕಳಸದಂತಿರುವ ಮನೆ ಯಾವುದಾದರೂ ಇದ್ದರೆ ಅದು ಶಾಸಪ್ಪಗೌಡರ ವಾಡೆ. ಆಸ್ತಿ–ಅಂತಸ್ತು ಮತ್ತು ಅಧಿಕಾರವನ್ನು ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಊರ ಸಂರಕ್ಷಣೆಯ ಹೊಣೆಯನ್ನು ಹೊತ್ತು ನಿಂತಿದೆ. ಈ ವಾಡೆಯ ಹಿರಿ ಗೌಡಸಾನಿ ರುದ್ರಾಯಣಿ ಶಾಸಪ್ಪಗೌಡನೊಂದಿಗೆ ಸುಖ–ಸಂತೃಪ್ತಿಯಿಂದ ಬದುಕನ್ನು ಬದುಕುತಿದ್ದಳು. ಆದರೆ, ಅದೊಂದು ದಿನ ನಾಗರ ಪಂಚಮಿ ಕರಿ ಕುದುರೆಯನ್ನು ಹತ್ತಿ ಸಾಂಗ್ಲಿವರೆಗೆ ಪ್ರಯಾಣ ಬೆಳೆಸಿದ ಶಾಸಪ್ಪಗೌಡ ಆಕಸ್ಮಿಕವಾಗಿ ತನ್ನ ಕಣ್ಣಿಗೆ ಕಾಣಿಸಿದ ಪುರಂದವಾಡಿಯ ಸರಸವ್ವಳ ಸೌಂದರ್ಯಕ್ಕೆ ಮಾರು ಹೋಗುತ್ತಾನೆ. ತನಗೊಬ್ಬ ಪತ್ನಿ ಇರುವಳೆಂಬುದನ್ನು ಮರೆತು, ಸರಸ್ವಳ ಪರಿಚಯ ಮಾಡಿಕೊಳ್ಳುತ್ತಾನೆ. ತನ್ನ ಪ್ರೇಮ ನಿವೇದನೆಯನ್ನು ಸರಸವಳ್ಳ ಮುಂದಿಡುತ್ತಾನೆ. ಆಗ ಸರಸವ್ವಳ ಉತ್ತರ : "ನನಗಾದರೂ ನಾಲ್ಕು ಮಂದಿ ಅಣ್ಣ ತಮ್ಮಂದಿರು ಅವ್ವ–ಅಪ್ಪ ತುಂಬಿದ ಮನಿ ನಂದು. ಗುಡಿಸಲು ಅಂತ ಮೂಗು ಮುರಿಬ್ಯಾಡ. ಬಡವರು ನಾವು ಬಡತನ ಅಂಬುವುದು ಇಲ್ಲ ಚಂದಾಗಿ ಬೆಳೆದಿದ್ದೇನೆ"(ಪು. 262) ಎಂದು ವಿನಯದಿಂದ ಉತ್ತರಿಸುವುದು ನಾನು ಶಿರಹಾಡಿಯ ವಾರಸುದಾರಳಾಗುವೆನೆಂಬ ಮುಂದಾಲೋಚನೆಗಾಗಿ. ಆದರೆ ಶಾಸಪ್ಪಗೌಡ ಸರಸವ್ವಳ ಸೌಂದರ್ಯವನ್ನು ಕಣ್ಣು ತುಂಬಿಕೊಂಡಂದಿನಿಂದ ಕುಂತಲ್ಲಿ ಕೂರಲಾಗದೆ, ನಿಂತಲ್ಲಿ ನಿಲ್ಲಲಾಗದೆ ತನಗೊಬ್ಬ ಪತ್ನಿ ಇದ್ದಾಳೆಂಬುದನ್ನು ಲೆಕ್ಕಕ್ಕೆ ತೆಗೆದು ಕೊಳ್ಳದೆ, ಪುರಂದವಾಡಿಗೆ ಹೋಗಿ ಸರಸವ್ವಳ ತಂದೆ–ತಾಯಿಯನ್ನು ಒಪ್ಪಿಸಿ ಮದುವೆಯಾಗಿ ಶಿರಹಾಡಿಗೆ ಕರೆ ತಂದಾಗ, ಒಂದು ಮಾತನ್ನು ಆಡದ ರುದ್ರಾಯಣಿ ಸವತಿ ಸರಸವ್ವಳನ್ನು ಮನೆ ತುಂಬಿಸಿಕೊಡು ಅನನ್ಯವಾಗಿಯೇ ಇರುವುದು. ಸ್ತ್ರೀವಾದಿ ಚಿಂತಕಿ ವೆಂ. ವನಜ ಅವರು ಗ್ರಹಿಸಿರುವಂತೆ : "ನಮ್ಮ ದೇಶದಲ್ಲಿ ಮಹಿಳೆಯರು ಹಲವು ಬಗೆಯ ಶೋಷಣೆಗಳಿಗೆ ಒಳಗಾಗುತಿದ್ದಾರೆ. ಲೈಂಗಿಕತೆ, ದುಡಿಮೆ, ಉತ್ಪಾದನೆ, ಸಂತಾನೋತ್ಪತ್ತಿ, ಚಲನೆ ಮುಂತಾದ ತನ್ನದಾದ ಎಲ್ಲದರ ಮೇಲೂ ತನ್ನ ಹಿಡಿತವನ್ನು ಕಳೆದುಕೊಳ್ಳುವ ಮೂಲಕ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದ್ದಾಳೆ."( ಎಚ್. ಎಸ್. ಶ್ರೀಮತಿ (ಸಂ.)ಮಹಿಳಾ ಅಧ್ಯಯನ, ದಕ್ಷಿಣಾಯನ ಸಂಚಿಕೆ, ಜುಲೈ–2000, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.ಪು. 57)ಎಂಬ ವಿಚಾರ ಇಲ್ಲಿ ಬರುವ ಎಲ್ಲಾ ಮಹಿಳೆಯರಿಗೂ ಅನ್ವಯಿಸುತ್ತದೆ. ಆದರೆ, ಸರಸವ್ವ ಶಿರಹಾಡಿಗೆ ಬಂದ ಕೆಲವೇ ದಿನಗಳಲ್ಲಿ ಕಿರಿಗೌಡಸಾನಿಯಾಗಿ ಹೆಸರು ಮಾಡಿದಳು. "ಶಿರಹಾಡಿಯ ಒಳಗ ದೇವರ ಮಾತು ಮೀರಿದವರು ಇದ್ದಿರಬೇಕು. ಆದರೆ, ಸರಸ್ವಗೌಡತಿಯ ಮಾತು ಮೀರಿದವರಿರಲಿಲ್ಲ."(ಪು.265)ಎನ್ನುವ ಮಾತು ಬರೀ ಮಾತಾಗಿ ಉಳಿಯದೆ ಪ್ರೀತಿಯಿಂದ ಗಳಿಸಿದ ಕೀರ್ತಿ ಆಗಿತ್ತು. ಎಂಬ ವಿಚಾರ ಮಹಿಳಾ ಅಸ್ಮಿತೆಗೆ ಸಾಕ್ಷಿಯನ್ನು ಒದಗಿಸುತ್ತದೆ. ಶಾಸಪ್ಪಗೌಡರ ವಾರಸುದಾರಿಕೆಗೆ ಇರುವ ಒಬ್ಬನೇ ಒಬ್ಬ ಮಗ ಗುರುಪಾದಪ್ಪ ಗೌಡ. ಗುರುಪಾದಪ್ಪಗೌಡ ಎರಡು ವರ್ಷದ ಮಗುವಿರುವಾಗಲೇ ಶಾಸಪ್ಪಗೌಡರು ತೀರಿದರು. ಇಂತಹ ಪರಿಸ್ಥಿತಿಯಲ್ಲೂ ರುದ್ರಾಯಣಿಗೌಡತಿ ಹೊಣೆಗಾರಿಕೆಯನ್ನು ತನ್ನ ಹೆಗಲಿಗೆ ಹಾಕಿಕೊಂಡು ನಿಭಾಯಿಸಿದ್ದರು. ಗುರುಪಾದಪ್ಪ ಗೌಡ ಹರೆಯದವನಾಗಿ ಇಂದ್ರಾಣಿಯೊಂದಿಗೆ ಮದುವೆ ಮಾಡುವವರೆಗೂ ಸುಲಲಿತವಾಗಿ ಮುನ್ನಡೆಸಿ ಮಗ ಗುರುಪಾದಪ್ಪಗೌಡನ ಹೆಗಲಿಗೆ ಏರಿಸಿದಳು. ಗುರುಪಾದಪ್ಪಗೌಡರ ಹೆಗಲಿಗೆ ಹೆಗಲಾಗಿ ನಿಂತವಳು ಇಂದ್ರಾಯಣಿ. ಶಿರಹಾಡಿಯ ಚರಿತ್ರೆಯಲ್ಲಿ ಆಗಬಾರದೆ ಆದದ್ದು, ಅಣ್ಣ ದೇಸಾಯಿಯ ಕೊಲೆ. ಹೋಟೆಲ್ ನಡೆಸಿಯೆ ಬದುಕನ್ನು ಕಟ್ಟಿಕೊಳ್ಳಲು ಬಂದ ಕೋಕ ಭೀಮ ಮತ್ತು ಪೋನುಗಿರೆಪ್ಪಗೌಡರು ಅಧಿಕಾರವನ್ನು ತೆಗಳಿ ಪೊಲೀಸರಿಗೆ ದೂರು ಕೊಡಲು ಹೋಗಿದ್ದ ಸಂಗತಿಯನ್ನು ಹುಟ್ಟು ಹಾಕಿದಾಗ ಗಂಡನಲ್ಲಿ ಧೈರ್ಯವನ್ನು ತುಂಬಿದವಳು ಇಂದ್ರಾಯಿಣಿಗೌಡಸಾನಿ. ಇಂದ್ರಾಯಣಿ ಹೇಳುವಂತೆ "ದೇಸಾಯಿ ಸತ್ತನಾ ಸತ್ತ. ಅದಕ್ಯಾನ ಮಾಘುದು, ನೀವು ಊರ ಗೌಡರ ಅದಿರಿ ಮತ್ತು ನಿಮ್ಮ ಹೆಂಡತಿ ಲಾಯರಕಿ ಓದ್ಯಾಳ ಅನ್ನೋದು ತಿಳಕೋರಿ"(ಪು.29)ಎಂಬುವ ಮಾತು ಮಹಿಳಾ ಅಸ್ಮಿತೆಯನ್ನು ಸಾಬೀತುಪಡಿಸುವುದು. ಹೀಗೆ ದಿನಗಳು ಉರುಳುತ್ತಿದ್ದಂತೆ ಹಳಬ ನಿಂಗಪ್ಪ 'ನಾ ಹಳಬಕಿ ಬಿಟ್ಟ ಬಿಟ್ಟನ್ರೀ' ಎಂದಾಗಲೇ ಗುರುಪಾದಪ್ಪಗೌಡರ ಶಕ್ತಿ ಸಾಮರ್ಥ್ಯ ಇಳಿದು ಹೋಗುವ ಲಕ್ಷಣವನ್ನು ಕಂಡ ಇಂದ್ರಾಯಣಿಗೌಡತಿ, ಮೊಟ್ಟ ಮೊದಲ ಸಲ ಗಂಡನ ಪಕ್ಕದ ಕುರ್ಚಿಯನ್ನು ಎಳೆದು ಕುಳಿತುಕೊಂಡದ್ದು, ಮಹಿಳೆ ತನ್ನ ಹೊಣೆಗಾರಿಕೆಯನ್ನು ಸಾಬೀತುಪಡಿಸುವಂತೆ ಕಂಡುಬರುತ್ತದೆ. ಕಾದಂಬರಿಕಾರರು ಹೇಳುವಂತೆ "ಗೌಡರ

ಮನೆತನದ ಯಾವೊಬ್ಬ ಸೊಸೆಯು ಹಾಗೆ ಪಡಸಾಲೆಗೆ ಬಂದು ಕುಂತವರಲ್ಲ. ಗೌಡರ ಮನೆಯಲ್ಲಿ ಹೆಣ್ಣೊಬ್ಬಳು ಪಡಸಾಲೆಯಲ್ಲಿ ಹಾಗೆ ಬಂದು ಕುಂತ ಸಂಗತಿಯೇ ಊರ ಬದಲಾವಣೆಗೆ ನಾಂದಿಯಾಗುವತ್ತ ಸಾಗಿತ್ತು."(ಪು. 172) ಹೀಗೆ ಧೀರತನವನ್ನು ಮೆರೆದ ಕಾನೂನು ಪದವೀಧರೆ ಇಂದ್ರಾಯಣಿಗೌಡತಿ, ಹಳಬ ನಿಂಗಪ್ಪನಿಗೆ ಪ್ರಜಾಪ್ರಭುತ್ವದ ಅರಿವನ್ನು ಮೂಡಿಸಿದಳು. ಹೀಗಾಗಿ ಹಳಬ ನಿಂಗಪ್ಪ ಇಂದ್ರಾಯಣಿಗೌಡ ಸಾನಿಯಾ ಮಾತನ್ನು ತೆಗೆದುಹಾಕುವಂತೆ ಇರಲಿಲ್ಲ. ಇದೆಲ್ಲವನ್ನು ಅರಿತುಕೊಂಡಂತಿರುವ ಇಂದ್ರಾಯಣಿಗೌಡಸಾನಿ, "ಆತ ನೀ ಬಾಳ ದಣದ್ ಬಂದೀದಿ. ಈಗ ಮನಿಗಿ ಹೋಗ. ಹಂಗಾ ಹಾದ್ಯಾಗ ಆ ರಾಮಯ್ಯ ಸ್ವಾಮಿಗೆ ವಾಡೆ ಕಡೆ ಬಾ ಅಂತ ಹೇಳಿ ಹೋಗು" ( ಪು. 173)ಎನ್ನುವುದು ಮಹಿಳೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಎಂಬಂತೆ ಕಮಡುಬರುತ್ತದೆ. ಆದರೆ ಇದೆಲ್ಲವನ್ನು ತದೇಕ ಚಿತ್ತದಿಂದ ನೋಡುತಿದ್ದ ಪುರುಷ ಪ್ರಧಾನ ಸಮಾಜದ ಪ್ರತಿನಿಧಿಯಂತಿದ್ದ ಗುರುಪಾದಪ್ಪಗೌಡ ತನ್ನ ಪೊಲೀಸ್‌ಪಾಟೀಲ್ ಆಧಿಕಾರವನ್ನು ಕಿತ್ತುಕೊಂಡಂತಾಗಿ ಒಂದು ಕ್ಷಣ ಹೆದರಿ ಅಧೀರನಾಗುತ್ತಾನೆ.

ಅಕ್ಷರ ಜ್ಞಾನವುಳ್ಳ ಇನ್ನೋರ್ವ ಮಹಿಳೆ ಅಣ್ಣಾಜಿ ಅವರ ಹೆಂಡತಿ ಸುಮಿತ್ರಾ ದೇಸಾಯಿ. ಭಾರತೀಯ ಚರಿತ್ರೆಯಲ್ಲಿ ನಡೆದು ಬಂದಿರುವ ದಾರಿಯನ್ನೇ ಕ್ರಮಿಸುತ್ತಾಳೆ. ಇನ್ನೂ ಅಕ್ಷರದ ಗಂಧವನ್ನೇ ಅರಿಯದ ಗೋಪಾಲ ಕುಲಕರ್ಣಿಯ ಹೆಂಡತಿ ಮಹಾಂತವ್ವ ಅಪ್ಪಟ ಭಾರತೀಯ ಸಂಪ್ರದಾಯವನ್ನು ಒಪ್ಪಿಕೊಂಡಂತಿರುವ ಸ್ತ್ರೀ.

ಹದಿಹರೆಯದ ಮಹಿಳೆಯರನ್ನು ಕುರಿತು ನೋಡುವುದಾದರೆ, ಐನಾಪುರದ ಸರ್ ದೇಸಾಯಿ ಹೆಂಡತಿ ಋತಿಕಾ ದೇಸಾಯಿ ದೇಸಾಯಿ ಮನೆತನದ ಸೊಸೆಯಾಗಿ ಗಂಡನ ಮಾನ, ಮರ್ಯಾದೆಯನ್ನು ಹದಿನೈದು ವರ್ಷಗಳ ಕಾಲ ಕಾಪಾಡಿಕೊಂಡು ಬಂದವಳು. ಕೊನೆಯದಾಗಿ ತಾನೇ ಬರೆಯಿಸಿದ ಪತ್ರಕ್ಕೆ ಉತ್ತರ ಬರದೇ ಇದ್ದಾಗ, ಹಳಬರ ದೇವಮ್ಮನ ಮಗನೊಂದಿಗೆ ಸ್ನೇಹ ಬೆಳೆಸುತ್ತಾಳೆ. 'ಈ ವಾಡೆಗಳ ಹಣೆಬರಹವೇ ಇಷ್ಟು' ಎಂದುಕೊಂಡು ದೇವಮ್ಮನ ಮಗನೊಂದಿಗೆ ಓಡಿ ಹೋಗಿ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದ್ದು ಋತಿಕಾಳ ಸೈದ್ಧಾಂತಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಮೇಲ್ವರ್ಗದ ಎಲ್ಲಾ ಹೆಣ್ಣು ಮಕ್ಕಳಿಗೂ ಹೊರತಾಗಿರುವ ಪಾತ್ರ ಗೋಪಾಲರಾವ್ ಕುಲಕರ್ಣಿಯ ಮಗಳು ಸುಹಾಸಿನಿ. ಗಂಡನನ್ನು ಬಿಟ್ಟು ಬಂದು ತವರು ಮನೆಯಲ್ಲಿ ಉಳಿದ ಸುಹಾಸಿನಿ, ರಾಕೇಶನಂತಹ ವಿಷಯ ಲಂಪಟನೊಂದಿಗೆ ಅನೈತಿಕ ಸಂಬಂಧವನ್ನು ಅಪ್ಪಿಕೊಂಡು ಬಾಳುವ ಏಕೈಕ ಪಾತ್ರ.

ಭಾರತೀಯ ಚರಿತ್ರೆಯಲ್ಲಿ ಹೆಣ್ಣು ಅಕ್ಷರ ಕಲಿತದ್ದು ಅಪರೂಪ. ಅಂತಹದರಲ್ಲಿ ಮಾದರ ಜಾತಿಯ ಹುಡುಗಿ ಅಕ್ಷರವನ್ನು ಕಲಿತದ್ದು ಅಚ್ಚರಿಯನ್ನುಂಟು ಮಾಡಿದೆ. ಗುರುಪಾದಪ್ಪ ಗೌಡನ ಮನೆಯಲ್ಲಿ ಜೀತುದಾಳವಾಗಿ ಜೀವನವನ್ನು ಸವೆಸಿದ್ದ ಮಾದರ ಯಮನಪ್ಪ ಮೊಮ್ಮಗಳು ಗೌರಿ. ತಂದೆ–ತಾಯಿಗಳಿಲ್ಲದ ಅನಾಥ ಬಾಲೆ. ಅಥಣಿಯ ದೇವದಾಸಿ ವಸತಿ ಶಾಲೆಯಲ್ಲಿದ್ದು ಓದಿದವಳು. ಊರಿನ ಇತಿಹಾಸದಲ್ಲೇ ಮೊಟ್ಟಮೊದಲನೇ ಸಲ ಒಂದು ಹೆಣ್ಣು ಹುಡುಗಿ ಶಾಲೆ ಕಲಿಯಲು ಊರು ಬಿಟ್ಟು ಹೋಗಿದ್ದು, ಗೌಡನಿಗೆ ಸೋಜಿಗದ ಸಂಗತಿಯಾಗಿ ಕಾಣಿಸಿತ್ತು. ಮಾದರ ಹುಡುಗಿ ಒಬ್ಬಳು ಪದವಿಯನ್ನು ಪಡೆದುಕೊಂಡಿದ್ದು ಸಾಮಾನ್ಯವಾದ ಕೆಲಸವೇ? ಅಂತಹುದರಲ್ಲಿ ಒಂದು ದಿನ ಬೆಂಗಳೂರಿನ ಬಸ್ಸೊಂದರಲ್ಲಿ ಆಕಸ್ಮಿಕವಾಗಿ ಬಾಲ್ಯದ ಸ್ನೇಹಿತ ಶಿವಲಿಂಗು ಮತ್ತು ಗೌರಿಯ ಭೇಟಿ ಆಯಿತು. ಸಮಾಜವಾದ ಮತ್ತು ಸಮತಾವಾದದ ಆದರ್ಶವನ್ನು ಪಾಲಿಸುತ್ತಿದ್ದ ಶಿವಲಿಂಗು ಮತ್ತು ಗೌರಿಯ ಸ್ನೇಹದ ಕಡೆ ತಿರುಗಿ ಈರ್ವರಲ್ಲಿ ಪ್ರೇಮಾಂಕರವಾಗಿ ನಂತರದಲ್ಲಿ ಮದುವೆಯಾಗಿ ಶಿರಹಾಡಿಗೆ ಬಂದಾಗ, ಜೀವಮಾನದ ಒಟ್ಟು ಬದುಕನ್ನು ವಾಡೆಯಲ್ಲಿ ಸವೆಸಿದ್ದ ಮಾದರ ಯಮುನಪ್ಪನ ಮೊಮ್ಮಗಳು ಎಂಬ ಉತ್ತರದಿಂದ ಕಂಗಾಲಾದ ಗೌಡರಿಗೆ ಬಾಯಿಂದ ಮಾತು ಹೊರಡಲೇ ಇಲ್ಲ. ಕೊನೆಗೂ ಗೌಡಸಾನಿಯವರೇ ಮಗನ ಹೆಂಡತಿ ವಿದ್ಯಾವಂತೆ ಮಹಾದೇವಿಯನ್ನು ಕರೆದು ಆರತಿ ಮಾಡಿಸಿ ಗೌರಿಯನ್ನು ಮನೆ ತುಂಬಿಸಿಕೊಂಡದ್ದು ಭಾರತೀಯ ಚರಿತ್ರೆಯಲ್ಲಿ ಸಾಮಾಜಿಕ ಮೌಲ್ಯವನ್ನು ಎತ್ತಿ ಹಿಡಿದಂತೆ ಕಂಡುಬರುತ್ತದೆ.

**ಮಧ್ಯಮ ವರ್ಗದ ಮಹಿಳೆಯರು :**

ಈ ಕಾದಂಬರಿಯಲ್ಲಿ ಬರುವ ಮಧ್ಯಮ ವರ್ಗದ ಮಹಿಳೆಯರು ಅನಕ್ಷರಸ್ಥರು. ಇದ್ದುದರಲ್ಲಿ ಸುಖ, ಶಾಂತಿಯನ್ನು ಅರಸುವ ಬಡಜೀವಿಗಳು. ಇವರೆಲ್ಲರೂ ತಮ್ಮ ರಟ್ಟೆಯ ಬಲವನ್ನು ನಂಬಿ ಬದುಕಿದ ಶ್ರಮ ಜೀವಿಗಳು. ಮಾಲಗಾರ ಅಪ್ಪಣ್ಣನ ಹೆಂಡತಿ ಗೌರವ್ವ ಗಂಡನಂತೆ ಬಸವಣ್ಣನ ಭಕ್ತೆ. ಬಸವಣ್ಣನ ತತ್ವವನ್ನು ನಿಜವಾಗಿಯೂ ಪಾಲನೆ ಮಾಡಿಕೊಂಡು ಬಂದವರು. ಗಂಡನು ಮಾಡುವ ಕೆಲಸಗಳಿಗೆ ಪ್ರೋತ್ಸಾಹವಿಯುತ್ತಲೇ ಬಂದವಳು ಗೌರವ್ವ. ಶಿರಹಾಡಿಯಲ್ಲಿ ಗೌರವ್ವಳ ಪಾತ್ರ ಆದರ್ಶ ವ್ಯಕ್ತಿತ್ವದ ಮಾದರಿಯ ಪಾತ್ರ.

ಶರಣೆ ನೀಲವಜ್ಜಿ ಕಲ್ಲಮೇಶ್ವರ ಗುಡಿಯಲ್ಲಿ ಭಕ್ತಿಯ ಸೇವೆ ಮಾಡಿಕೊಂಡಿರುವ 'ಶರಣರ ಬರವಮಗೆ ಜೀವಾಳ' ಎಂದುಕೊಂಡು ಬದುಕಿದವಳು. ಬದುಕಿನ ಎಲ್ಲಾ ಘಟ್ಟಗಳನ್ನು ದಾಟಿ ಬಂದಂತಿರುವ ಕುಂಬಾರ ನೀಲವ್ವಳ ಬದುಕು ಆಧ್ಯಾತ್ಮದ ಮೆಟ್ಟಿಲೇರಿ ಅನುಭವದ ಪರಿಮಳವನ್ನು ಹಂಚಿ ಬದುಕನ್ನು ಹಸನಾಗಿಸುವ ಪಾತ್ರವಾಗಿ ಕಾಣುತ್ತಾಳೆ. ಅತ್ಯಾಚಾರಕ್ಕೆ ಒಳಗಾಗಿ ಬದುಕೇ ಬೇಡವೆಂದು ಅನ್ನ, ನೀರು ಬಿಟ್ಟು ಉಪವಾಸ ಬಿದ್ದಾಗ ಬದುಕಿಗೆ ಪೇರೇಪಣೆ ನೀಡಿದವಳು ನೀಲವ್ವ. ಹೀಗೆ ಸತ್ತರೆ ಸಾರ್ಥಕವೇನು? ಬದುಕಬೇಕು ಗಿರೆವ್ವ ಸೇಡಿಗಾಗಿಯಾದರೂ ಬದುಕಬೇಕು ಅದಕ್ಕಾಗಿ ಉಣ್ಣಬೇಕು. ಗಿರೆವ್ವಳಿಗೆ ಅರಿವು ಮೂಡಿಸಿದ್ದು ನೀಲವ್ವಳ ಜಾಣತನ.

ಹಳಬ ನಿಂಗಪ್ಪನ ಹೆಂಡತಿ ನ್ಯಾಮವ್ವ ಮೂರು ನಾಲ್ಕು ವರ್ಷದ ಮಗನನ್ನು ಕಳೆದುಕೊಂಡು ಕನವರಿಕೆಯಲ್ಲಿ ಜೀವನ ತಳ್ಳಿದರೆ, ಬಿರಾದರ ಪಂಚಪ್ಪನ ಹೆಂಡತಿ ಸಾತೀರವ್ವ ತನನ್ನು ತಾನು ಹೊಗಳಿಕೊಳ್ಳುವುದರಲ್ಲಿ ಖುಷಿ ಕಂಡವಳು. ಜಿಂಗಾಡಿ ಭೀಮನ ಹೆಂಡತಿ ಚಂದವ್ವ ಗಟ್ಟಿಗಿತ್ತಿ. ಅಣ್ಣ ದೇಸಾಯಿನ ಕೊಂದು ಭೀಮ ಜೈಲು ಸೇರಿದಾಗಲೂ ದೃತಿಗೆಡದೆ ಬದುಕು ನೂಕಿದಳು. ಮಗ ಬಾಪುನನ್ನು ಪರ ಊರಿನ ಶಾಲೆಗೆ ಕಳಿಸಬೇಕೆಂದಾಗ ಶರಣ ಅಪ್ಪಣ್ಣಪ್ಪನವರ ಹತ್ತಿರ ಹೋಗಿ ಸಹಾಯ ಪಡೆದು ಬಪುನನ್ನು ಶಾಲೆಗೆ ಸೇರಿಸುವುದು ಚಂದವ್ವಳ ಧೈರ್ಯಕ್ಕೆ ಸಾಕ್ಷಿಯಾಗಿದೆ. ಇನ್ನೊಂದೆಡೆ ಇದೇ ಶರಣ ಅಪ್ಪಣ್ಣನ ತಾಯಿ ರತ್ನವ್ವ ಆಷಾಢದ ಮಳೆಗಾಲದಲ್ಲಿ ಕೆಲಸ ಮಾಡುತ್ತಿರುವಾಗ ಕೃಷ್ಣ ಹೊಳೆ ತುಂಬಿ ನಡುಗಡ್ಡೆಯಾಗುವ ಸಂಭವವಿತ್ತು. ಅದರ ಮುನ್ಸೂಚನೆಯನ್ನರಿತ ರತ್ನವ್ವ ಕೂಸು ಅಪ್ಪಣ್ಣನನ್ನು ಬೆನ್ನಿಗೆ ಕಟ್ಟಿಕೊಂಡು ಆಲದ ಮರವೇರಿ ಎರಡು ರಾತ್ರಿ, ಒಂದು ಹಗಲು ಕಳೆದು ಶಿರಹಾಡಿಗೆ ತಲುಪಿದ್ದು ಸಾಮಾನ್ಯ ವಿಷಯವಾಗಿರಲಿಲ್ಲ.

ಸಿರಿತನಕ್ಕೂ ಮತ್ತು ಪಾವಿತ್ರ್ಯಕ್ಕೂ ಹೆಸರಾದ ಶಿರಹಾಡಿ ಊರಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಗಿರೆವ್ವ ದುರ್ಗಿಯ ಅವತಾರ ತಾಳಿದಂತೆ ಕಂಡು ಬಂದರೆ, ಇನ್ನೊಂದಡೆ ಸುಂದ್ರಾ 20 ವರ್ಷ ಗಿರಿಮಲ್ಲನೊಂದಿಗೆ ಜೀವಿಸಿ, ಬಾಲ್ಯದ ಕನಸಿಗೆ ಮರುಜೀವ ನೀಡಿ, ಪೋಸ್ಟ್‌ಮನ್ ಸಿದ್ರಾಮನೊಂದಿಗೆ ಓಡಿ ಹೋಗಲು ಯೋಚಿಸಿ ಅದಃಪತನದ ಹಾದಿ ಹಿಡಿದಳಾದರೂ ಸಂದರ್ಭದ ಕೈ ಕೂಸು ಆಗದೆ ಹುಚ್ಚಮಲ್ಲವಳ ಅವತಾರವೆತ್ತಿ ರಾಕೇಶ ದೇಸಾಯಿ, ಸರಪಂಚ್ ಮಹದೇವಪ್ಪ ಮತ್ತು ಗೋಪಾಲರಾವ್ ಕುಲಕರ್ಣಿಗಳಿಗೆ ಅಘಾತವನ್ನುಂಟು ಮಾಡುವ ಮೂಲಕ ಪಾವಿತ್ರ್ಯವನ್ನು ಕಾಪಾಡಿಕೊಂಡಿದ್ದು, ಸುಂದ್ರಾಳ ನೈತಿಕ ಸ್ಥೈರ್ಯದ ಪ್ರತೀಕವಾಗಿ ಕಾಣಬರುತ್ತದೆ.

ಶಿರಹಾಡಿ ಗಿರೆವ್ವಳ್ಳದು ಸುಖಿ ಸಂಸಾರ. ಗಂಡ ಶಿವರಾಯನೊಂದಿಗೆ ಸಮ–ಸಮನಾಗಿ ದುಡಿದು ಊರಲ್ಲಿ ನಾವು ಯಾರಿಗೂ ಕಡಿಮೆ ಎನ್ನುವಷ್ಟರ ಮಟ್ಟಿಗೆ ಸುಖದ ಸುಪ್ಪತ್ತಿಗೆಯಲ್ಲಿ ಮೆರೆದವಳು. ಆದರೆ, ತಿಂದುಂಡು ಸುಖವಾಗಿ ಬೆಳೆದು ನಿಂತಿದ್ದ ಗಿರೆವ್ವಳ ಸುಂದರ ಕಾಯ ದೇಸಾಯಿ ರಾಖೇಶನ ಕಚ್ಚೆ ಹರಕುತನದ ಹೊಟ್ಟೆ ಕಿಚ್ಚಿಗೆ ಈಡು ಮಾಡುತ್ತದೆ. "ಕಾಮಾತುರಣಂ ನ ಭಯಂ ನ ಲಜ್ಜಂ" ಎಂಬುವಂತೆ ಗಿರೆವ್ವಳ ಗಂಡ ಶಿವರಾಯನನ್ನು ಕೊಂದು ಹೊಳೆಗೆ ಬೀಸಾಡುತ್ತಾರೆ. ಅದೊಂದು ದಿನ ರಾತ್ರಿ ಕಾದು ಕುಳಿತು ಗಿರೆವ್ವಳ ಮೇಲೆ ಅತ್ಯಾಚಾರ ಎಸಗುತ್ತಾರೆ. ತನ್ನಷ್ಟೇ ತಾನೆ ಹೇಸಿಗೆ ಪಡುವ "ಥು ಹಾಳಾದ ಜೀವ, ಇದ್ದರೂ ಅಷ್ಟೇ ಸತ್ತರೂ ಅಷ್ಟೇ, ಎಂದುಕೊಂಡವಳು ವೃದ್ದೆ ನೀಲವ್ವಳ ಅನುಭವದದ ಮತಿಗೆ ಸೋತು ಸೇಡಿಗಾಗಿ ಬದುಕುತ್ತಾಳೆ.

ದುಃಖ, ನೋವು, ಅವಮಾನ, ಅಪಮಾನದ ಹಂಗಿನಲ್ಲಿ ಜೀವನವನ್ನು ಸವೆಸಿ ಆ ದಿನ ಸಮೀಪಸಿದಾಗ "ನಾ ಇಷ್ಟ ದಿನ ಅದರ ಸಲುವಾಗೇನ್ ಕಾಯ್ಕೊಂಡು ಜೀವ ಹಿಡದ ಕುಂತೇನಿ, ಇಲ್ಲದಿರಕಾ ಈ ಕಾಯ ಎಂದೋ ಹಿರಿ ಹೊಳಿ ಗಂಗಾಮಯಿಯಲ್ಲಿ ಸೇರಿ ಬಿಡುತಿತ್ತು."(ಪು. 45) ಒಡಲೊಳಗಿನ ಸಂಕಟವನ್ನು ಹೊರಹಾಕಿದ ಗಿರೆವ್ವಾ "ನಾ ಕೊಲ್ಲದಿಲ್ಲ ಲೇ ತೊಡಸಲ ದೇಸಾಯಿ, ನಾ ಏನಿದ್ರೂ ನಿನ್ನ ತೊಡಿ ಸಂಧ್ಯಾನ ತಾಕತ್ ನೋಡಾಕ್ ಬಂದೀನಲೆ....."ಎಂದು ಅವನ ತೊಡೆಯ ನಡುವೆ ಕೈ ಹಾಕಿ ಚರಕ್ ಎಂದು ಅವನ ಸಂಸಾರವನ್ನು ಕೊಯ್ದು ಧೀನ್ ಹಾಕುವುದು ಸೇಡಿನ ಪ್ರತಿಕಾರದ ಜಯವಾಗಿ ಕಂಡುಬರುತ್ತದೆ. ತನ್ನ ಮೇಲಾದ ಅತ್ಯಾಚಾರದಂತ ಅಘಾತಗಳು ಶಿರಹಾಡಿಯ ಯಾವ ಮುಗ್ದ ಹೆಣ್ಣುಗಳ ಮೇಲೆ ನಡೆಯದಿರಲಿ ಎಂಬ ಆಶಯ ಅವಳದು. ಸಮಾಜದ ಕಣ್ಣಲ್ಲಿ ಹುಚ್ಚಿಯತೆ ಕಂಡರೂ ಸಿರಹಾಡಿಯ ಜೀವಪರ ಕಾಳಜಿಯುಳ್ಳ ಮಹಾತಾಯಿ.

ಗಿರೆವ್ವಳ ಹಾಗೆಯೇ ನೈತಿಕ ಬದುಕಿನ ಬಂಡಿಯನ್ನು ನುಕೂತಿದ್ದ ಸುಂದ್ರಾ, ಮಾಗಣಿ ಚೆಂಪಿ ತನ್ನನ್ನು ಛೇಡಿಸಿದ ಸರಪಂಚ ಮಹಾದೇವಪ್ಪನಿಗೆ ಚಪ್ಪಲಿ ಸೇವೆ ಮಾಡಲು ಹೆದರದ ಧೀಮಂತೆ.

ಮದುವೆಯಾಗಿ ಇಪ್ಪತ್ತು ವರ್ಷ ಕಳೆದು ಎದೆ ಎತ್ತರಕ್ಕೆ ಬೆಳೆದು ನಿಂತ ಮಗಳಿದ್ದರೂ, ಒಂದರಗಳಿಗೆಯೂ ಗಂಡನಿಂದ ಸುಖ ಕಾಣದೆ ಇದ್ದವಳು. ಅಣ್ಣನನ್ನು ಕಾಣಲು ಬಂದಾಗ ತವರಿನಲ್ಲಿದ್ದ ಪೋಸ್ಟ್‌ಮ್ಯಾನ್ ಸಿದ್ರಾಮನೊಂದಿಗೆ ಸುಖದ ಸವಿ ಉಂಡವಳು. ಎಲ್ಲಾದರೂ ದೂರ ಹೋಗಿ ಸಂಸಾರ ಜೀವನ ನಡೆಸುವುದಾಗಿ ಯೋಚಿಸಿ, ತಾವಿಬ್ಬರು ಅಂದುಕೊಂಡಂತೆ ಮಧ್ಯಾಹ್ನವೇ ಮನೆ ಬಿಟ್ಟು ಹುಚ್ಚಮಲ್ಲಿ ಗುಡಿಯಲ್ಲಿ ಸಿದ್ರಾಮನಿಗಾಗಿ ಕಾದು ಕುಳಿತಳು. ಕಚ್ಚೇ ಹರಕು ಗುಣದ ರಾಖೇಶನಿಂದ ತಪ್ಪಿಸಿಕೊಂಡು ಹುಚ್ಚ ಮಲ್ಲವ್ವ ದೇವಿಯ ರೂಪದಲ್ಲಿ ದುರ್ಗೆಯ ಅವತಾರ ತಾಳಿ ತ್ರಿಶೂಲ ಹಿಡಿದು ಹೆದರಿಸಿ, ತನ್ನ ಪಾವಿತ್ರ್ಯ ಕಾಪಾಡಿಕೊಂಡಿದ್ದಕ್ಕೆ ಉತ್ತಮ ಉದಾಹರಣೆ. ಇನ್ನು ಮುಂದೆ ನನಗೇಕೆ ಸೀರೆ ಎಂದುಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ತನ್ನಷ್ಟಕ್ಕೆ ತಾನೆ ಸಮಾಧಾನ ಮಾಡಿಕೊಂಡು ಹುಚ್ಚಮಲ್ಲವ್ವಳ ಮೂರ್ತಿಯ ಹಿಂದೆ ಪದ್ಮಾಸನದಲ್ಲಿ ಪ್ರತಿಷ್ಠಾಪನೆಯದಳು. ಶಿರಹಾಡಿಯ ಸುಂದ್ರಾ ಹುಚ್ಚಮಲ್ಲವ್ವಳಾಗಿ ಸುತ್ತಲಿನ ಗ್ರಾಮಗಳಲ್ಲಿ ಕೀರ್ತಿ ಪಸರಿಸಿದಳು.

ಈ ಕಡೆ ಯಾವ ನಯ–ನಾಜುಕನ್ನು ಅರಿಯದೆ ಬದುಕನ್ನು ಸವೆಸುತಿದ್ದ ಮಾಯಕ್ಕಾ ಒಮ್ಮಿಂದೊಮ್ಮೆಲೆ ಮೌನಿಯದಳು. ಅನ್ನ ನೀರಿಲ್ಲದೆ ಅನಾರೋಗ್ಯವಂತಳಾಗಿ ದಿನಗಳು ಉರುಳಿದಂತೆ ಹುಚ್ಚಿಯಂತೆ ವರ್ತಿಸತೊಡಗಿದಳು. ಊರವರ ಒತ್ತಾಸೆಗೆ ಮಣಿದು ಮಾಯವ್ವಳನ್ನು ಹುಚ್ಚಮಲ್ಲವ್ವಳ ದರ್ಶನಕ್ಕೆ ತಂದಾಗ, ಇದೆ ಸಮಯಕ್ಕಾಗಿ ಕಾದಿದ್ದ ಸುಂದ್ರಾ(ಹುಚ್ಚಮಲ್ಲವ್ವ)ಭಂಡಾರ, ಕುಂಕುಮವನ್ನು ಒಗ್ಗೂಡಿಸಿ ಮಾಯವ್ವಳ ಮುಖಕ್ಕೆ ತೂರಿದಳು. ದಡಕ್ಕನೆ ಎದ್ದು ಕುಣಿಯತೊಡಗಿದಳು. ಕುಣಿ ಕುಣಿದು ಸುಸ್ತಾಗಿ ಭಕ್ತರೆಲ್ಲಾ ನಿದ್ದೆ ಹೋದಾಗ, ಸಿದ್ರಾಮನ ಮುಂದೆ ಪ್ರತ್ಯಕ್ಷಳಾಗಿ ಗುಡಿಯಿಂದ ದೂರ ಕೆರೆದೊಯ್ದು ಒಂದು ಬಂಡೆಯ ಮೇಲೆ ಕುಳಿತು "ಮುಖವಾಡ ಬಿಚ್ಚತೀನಿ ನೋಡಲೇ ನನ್ನ"(ಪು.357) ಎಂದು ಪ್ರಶ್ನಿಸಿದಳು. ಆದರೆ, ಅದೇಕೋ ಬೇಡವೆಂದೆಣಿಸಿ ಕೋಪಿಷ್ಠಳಾದ ಸುಂದ್ರಾ(ಹುಚ್ಚಮಲ್ಲವ್ವ) "ನಿನ್ನಂತ ನಾಯಿಗಳು ನನ್ನ ಮುಖ ನೋಡದು ಬ್ಯಾಡಲೇ"(ಪು. 358) ಎಂದವಳೇ ದಡಕ್ಕನೆ ಎದ್ದು ಸಿದ್ರಾಮನ ಎದೆಗೆ ಎಡಗಲಿನಿಂದ ಜಾಡಿಸಿ ಒದ್ದು ಕಾಣೆಯಾಗುವುದು, ತನ್ನನ್ನು ಮೋಸ ಮಾಡಿದ ಸಿದ್ರಾಮನ ಮೇಲಿನ ಸೇಡಿಗಾಗಿ ಎಂಬುದನ್ನು ಕಾಂಬರಿಕರ ಮನವರಿಕೆ ಮಾಡಿಕೊಡುತ್ತಾರೆ.

**ಕೆಳ ವರ್ಗದ ಮಹಿಳೆಯರು :**

ಶಿರಹಾಡಿಯಲ್ಲಿ ನ್ಯಾಯದ ಪ್ರತೀಕವಾಗಿರುವ ಗಂಟೆ ಎಂದರೆ, ಕಲ್ಮೇಶ್ವರನ ಗುಡಿಯ ಪೌಳಿಯಲ್ಲಿ ಕಾಶಿಯಿಂದ ತಂದು ಕಟ್ಟಿರುವ ಜೈ ಗಂಟೆ. ಕಾಶಿಯಾತ್ರೆ ಪೂರೈಸಿ ತಂದಿರುವ ಗಂಟೆಯನ್ನು ಕಲ್ಮೇಶ್ವರನ ಗುಡಿಯಲ್ಲಿ ಕಟ್ಟಬೇಕೆಂದು ಹೊಲೆಯರ ಸೂಲಗಿತ್ತಿ ಗೌರವ್ವ ಆಶಿಸಿದ್ದಳು. ಆದರೆ ಆ ಕನಸು ಕೈಗೂಡದೇ ಇರುವಾಗ ಹಠಕ್ಕೆ ಬಿದ್ದು ಗುಡಿಯ ಪೌಳಿಯಲ್ಲಿ ಕಟ್ಟಿ ಗೆಲುವು ಸಾಧಿಸಿದ್ದಳು. ಈ ಕರಣ ಈ ಗಂಟೆಗೆ ಜೈ ಗಂಟೆ ಎಂದೇ ಹೆಸರಗಿತ್ತು. ಸೂಲುಗಿತ್ತಿ ಗೌರವ್ವ ಶಿರಹಾಡಿಗೆ ಹೆಸರು ಮಾಡಿದವಳು. ಇಡೀ ಊರಿನ ಜನ ಗೌರವ್ವಳನ್ನು ಗೌರವದಿಂದ ಕಾಣುತ್ತಿದ್ದರು. ಊರಲ್ಲಿ ಯಾರ

ಹೆರಿಗೆ ಇರಲಿ ಗೌರವ್ವಳನ್ನ ಕರೀರಿ ಎನ್ನುವ ಊರ ಮಂದಿ, ಅವಳು ಬಂದರೆ "ಯಾವ ಮಡಿ ಮೈಲಿಗೆಯ ನೆನಪು ಮಾಡಿಕೊಳ್ಳದೆ ಅವಳನ್ನು ತಮ್ಮ ದೇವರ ಕೋಲಿ ಅಡಿಗೆ ಮನೆಯವರಿಗೂ ಬಿಟ್ಟುಕೊಳ್ಳುವ ಊರ ಮಂದಿಗೆ ಕಲ್ಮೇಶ್ವರ ಗುಡಿಯನ್ನು ಮಾತ್ರ ಪವಿತ್ರವಾಗಿಟ್ಟುಕೊಳ್ಳುವ ಇರಾಧೆ ಹೊಕ್ಕಿತ್ತು."(ಪು. 30) ಎಂಬ ಹೇಳಿಕೆಯನ್ನು ಗಮನಿಸಿದಾಗ ಧರ್ಮ ಮತ್ತು ದೇವತೆಗಳ ವಿಷಯಕ್ಕೆ ಬಂದರೆ, ಭಾರತೀಯ ಚರಿತ್ರೆಯಲ್ಲಿ ಜಾತಿಯೆಂಬ ಬೇರುಗಳು ಗಟ್ಟಿಗೊಂಡಿರುವಾಗ ಗೌರವ್ವಳ ಕನಸು ನನಸಾಗುವ ಸಾಧ್ಯತೆಯಿರಲಿಲ್ಲ. ಹಾಗಂತ ಗೌರಮ್ಮ ಕೈಕಟ್ಟಿ ಸುಮ್ಮನೆ ಕುಳಿತು ಕೊಳ್ಳಲೂ ಇಲ್ಲ. ಮೊಟ್ಟ ಮೊದಲ ಬಾರಿಗೆ ಪ್ರತಿಭಟಿಸಿದಳು. ತಾನು ತಂದಿರುವ ಕಾಶಿ ಗಂಟೆಯನ್ನು ಕಲ್ಮೇಶ್ವರನ ಗುಡಿಯ ಪೌಳಿಯಲ್ಲಿ ಕಟ್ಟಿ ಅಲ್ಲಿಯೇ ಇರಲು ಪ್ರಾರಂಭಿಸಿದ್ದು ಮಾನವ ಹಕ್ಕಿನ ಪ್ರತಿಪಾದನೆಯಾಗಿದೆ.* ಜಾತಿಯೆಂಬ ಭೂತದ ಹಿಡಿತದಿಂದ ಬಿಡಿಸಿಕೊಳ್ಳಲು ಬಯಸಿದ ಗೌರವ್ವ "ಈ ಊರಾಗಿನ ಅರ್ಧ ಹುಡುಗರು ಈ ಭೂಮಿ ಮ್ಯಾಲ ಬರೋದಕ್ಕಿಂತ ಮೊದಲು ನನ್ನ ಅಂಗೈಯಾಗ ಬಂದಾವ. ಅವ್ರನಾ ನಾನಾ ಈ ಭೂಮಿ ಮ್ಯಾಲ ಬಿಟ್ಟೇನಿ. ಈಗ ನಾ ಕೆಳ ಜಾತಿ ಆಕಿ ಹಾಂಗ ಅವರಿಗಿ ಕಾಣಸ್ತೀನಿ ಅಂದ್ರ ಸೋಜಿಗ. ಕೂಸುಗಳಿಗಿ ಇಲ್ಲದ ಜಾತಿ ತಾವ್ರುದ್ ಗಂಟೀಗಿ ಯಾಕ ತರ್ತಾರೋ ಕಾಶಿ ವಿಶ್ವೇಶ್ವರ ನೀನೇ ನೋಡಿಕೋ"(ಪು. 30–31)ವಿನಮ್ರಳಾಗಿ ನಿಜಶರಣೆಯಂತೆ ಬದುಕಿ, ಸತ್ತು ಸಮಾಧಿಯಾದ ಗೌರವ್ವ ದಂತ ಕಥೆಯಾಗಿದ್ದಳು. ಗೌರವ್ವ ಕೆಳಜಾತಿಯವಳಾಗಿದ್ದರು, ಸತ್ತ ಮೇಲೆ ದೇವರಾಗಿ, ದೈವವಾಗಿ ಊರ ಮಂದಿಯಿಂದ ಪೂಜಿಸಿಕೊಳ್ಳುತ್ತಿರುವುದು ಅವಳ ತಾತ್ವಿಕ ಬದುಕಿಗೆ ಸಾಕ್ಷಿಯಾಗಿದೆ.

ಮೂಲತಃ ಶಿರಹಾಡಿಯಲ್ಲಿ ಹುಟ್ಟಿ ಬೆಳೆದ ರೇಣುಕಾ ಪಾರವ್ವನ ಮಗಳು ಅಕ್ಷರದ ಗಂಧವನ್ನು ಅರಿಯದ ರೇಣುಕ ಹೊಟ್ಟೆಪಾಡಿಗಾಗಿ ಮುಂಬೈ ಪಟ್ಟಣ ಸೇರಿದವಲು. ಕಾಮಾಟಿಪುರ ಎಂಬುದು ಅನಾಥ ಹೆಣ್ಣು ಮಕ್ಕಳನ್ನು ಇಟ್ಟುಕೊಂಡು ವೇಶ್ಯಾವಾಟಿಕೆ ದಂದೆ ನಡೆಸುವ ಒಂದು ಗಲ್ಲಿ. ತನ್ನಂತೆ ಹೊಟ್ಟೆ ಬಟ್ಟೆಯನ್ನು ಹೊರೆಯುವುದಕ್ಕೆ ಬಂದ ಹಲವು ಹೆಂಗಳೆಯರಲ್ಲಿ ರೇಣುಕಾ ಒಬ್ಬಳು. ಎಲ್ಲರೂ ತಮ್ಮ ಶರೀರದ ಚೆಲುವನ್ನು ತೋರಿಸಿಕೊಂಡು ಇಲ್ಲವೇ ಮಾರಿಕೊಂಡು ಬದುಕನ್ನು ನೂಕಿದವರು. ಇಂತಹದರಲ್ಲೂ ರೇಣುಕಾ ಎಲ್ಲ ಮಾನವೀಯ ಸಹಜವಾದ ಪ್ರೀತಿಯನ್ನು ಮರೆತು ಬಾಳಿದವಳಲ್ಲ. ಮುಂಬೈ ರೈಲ್ವೆ ಸ್ಟೇಷನ್‌ನಲ್ಲಿ ಆಕಸ್ಮಿಕವಾಗಿ ಭೇಟಿಯಾದ ತನ್ನ ಊರಿನ ಪಂಚಪ್ಪ ಬಿರಾದರನ ಮಗ ಪ್ರಕಾಶನ ಗುರುತಿಸಿದಳು. ನೌಕರಿ ಎಂದು ಹೋದವನಿಗೆ ಅದು ಕೈಗೆಟುಕದೆ ಹೋದಾಗ ದಿಕ್ಕುಗೆಟ್ಟು ಕುಳಿತ ಪ್ರಕಾಶನಿಗೆ ಕೆಲಸ ದೊರಕಿಸಿಕೊಟ್ಟು ಅಕ್ಕ ಎಂಬ ಪ್ರೀತಿಗೆ ಪಾತ್ರಳದವಳು.

ಅಕ್ಕನ ಪತ್ರವನ್ನು ಕೈಯಲ್ಲಿ ಹಿಡಿದು ಕಾಮಾಟಿಪುರದ ಬಾಗಿಲಲ್ಲಿ ನಿಂತ ಗಂಗವ್ವಳನ್ನು ಮೊದಲ ಬಾರಿಗೆ ಕಂಡ ಪ್ರಕಾಶ, ಈ ನರಕ ಯಾತನೆಗೆ ತಳ್ಳಬಾರದೆಂದು ಬಗೆದು ಅವಳ ಬದುಕಿಗೆ ಆಧಾರವಾಗಿ ನಿಂತ. ಒಬ್ಬರಿಗೊಬ್ಬರು ಒಪ್ಪಿಕೊಂಡು ಮದುವೆಯಾಗಿ ನೆಮ್ಮದಿಯ ಜೀವನ ನಡೆಸುತ್ತಿದ್ದ. ಮುಂಬೈ ಬದುಕಿಗೆ ಹೇಗೆ ಒಗ್ಗಿಕೊಳ್ಳಬೇಕು ಎಂಬುದನ್ನು ಗಂಗಾಳಿಗೆ ಕಲಿಸಿಕೊಟ್ಟಿದ್ದ. ಹೀಗಿದ್ದು, ಪ್ರಕಾಶ ಒಮ್ಮೊಮ್ಮೆ ಎಡಬಿಡಂಗಿಯಂತೆ ಆಡುತ್ತಿದ್ದ. ಈ ಗುಣಗಳಿಂದಾಗಿ ಬೇಸತ್ತ ಗಂಗವ್ವ, ಸ್ವಾಲಂಬಿಯಾಗಿ ಬದುಕಲು ಇಚ್ಛಿಸಿದ್ದಳು. ಪ್ರಕಾಶ ಎಂದಾದರೂ ಒಂದು ದಿನ ಕೈ ಕೊಡುವನೆ ಎಂದುಕೊಂಡು ಪ್ರಕಾಶನಿಂದ ದೂರವಾಗಿ ಮುಂಬೈನ ಮಹಾನಗರದಲ್ಲಿ ಕಣ್ಮರೆಯಾದಳು. ಇದರ ಮುಂದುವರೆದ ಬಾಗವಾಗಿ ಊರಲ್ಲಿಯೇ ಉಳಿದು ಜೀವನವನ್ನು ಕಟ್ಟಿಕೊಂಡ ಮಾಗಣಿ ಚೆಂಪಿ, ತನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ ಸರಪಂಚ ಮಹಾದೇವಪ್ಪನಂತವರಿಗೆ ಚಪ್ಪಲಿ ಸೇವೆ ಮಾಡಿ ಉಳಿದೆಲ್ಲ ಹೆಂಗಳೆಯರಿಗೆ ಮಾದರಿಯಾಗಿದ್ದಾಳೆ.

ಕಾದಂಬರಿಯ ಪ್ರಾರಂಭದಿಂದಲೂ ಸುಂದರ ಬದುಕನ್ನು ಕಟ್ಟಿಕೊಳ್ಳಲು ಹೆಣಗುವ ಸ್ರೀ ಪಾತ್ರಗಳಿವೆ. ಇಡೀ ವಾಡೆಯನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವ ಚಲನಶೀಲ ಬದುಕನ್ನು ಹಿರಿಗೌಡ್ತಿ ರುದ್ರಾಯಣಿ, ಸರಸವ್ವ ಮತ್ತು ಇಂದ್ರಾಯಣಿರಲ್ಲಿ ಕಾಣಲು ಸಾಧ್ಯವಿದೆ. ನಾಗರೀಕ ಬದುಕಿಗೆ ಹೊಂದಿ ಕೊಂಡಂತಿರುವ ಮಾದರ ಯಮುನಪ್ಪನ ಮೊಮ್ಮಗಳು ಗೌರಿ, ಶಿವಲಿಂಗುವಿನ ಕೈ ಹಿಡಿದು ವಾಡೆಯ ವಾರಸುತನದ ಸೊಸೆಯಾಗುತ್ತಾಳೆ. ಆದರೆ ಇದಕ್ಕೆ ಹೊತಾದ ಸ್ತ್ರೀ ಪಾತ್ರಗಳು ಅಘಾತದಿಂದ ಹೊರಬರಲಾಗದೆ ದುರ್ಗಿಯ ಅವತಾರಗಳನ್ನು ತಾಳಿ ಸೇಡು

ತೀರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರೆ, ಇನ್ನೊಂದೆಡೆ ಹತಾಶೆಯ ಬದುಕನ್ನು ಬದುಕಿವೆ. ಕೊಲೆಗಡುಕ ದೇಸಾಯಿಗಳನ್ನು ಕೊನೆಗಾಣಿಸಬೇಕೆಂದೇ ಜೀವ ಹಿಡಿದು ಬದುಕುಳಿದ ಪಾತ್ರಗಳು ಸೇಡನ್ನು ಶಪತವಾಗಿಸಿಕೊಂಡು ಬದುಕು ಸಾಗಿಸಿದರೂ ಘನತೆ ಮತ್ತು ಗೌರವಗಳು ದಕ್ಕದೆ ಹೋಗಿರುವುದು ವಿಷಾಧನೀಯ ಸಂಗತಿ.

ಒಟ್ಟಾರೆ ಕಾದಂಬರಿಯಲ್ಲಿ ಮಹಿಳೆಯ ಅಸ್ಮಿತೆಯ ಅನಾವರಣವನ್ನು ಕುರಿತಂತೆ ಹೇಳುವುದಾದರೆ ವಿಭಿನ್ನ ನೆಲೆಗಳಿಂದ ಬಂದಿರುವ ಮಹಿಳೆಯರ ವೈವಿಧ್ಯಮಯ ಬದುಕನ್ನು ಕಾದಂಬರಿ ಕಟ್ಟಿಕೊಡುತ್ತದೆ. ಕಾದಂಬರಿಕಾರ ಹೇಳಿಕೊಂಡಂತೆ 'ಇದು ಬರಿ ಕಥೆಯಲ್ಲ. ಇದು ಭೂಮಿಯ ಮೇಲೆ ಬದುಕಿ ಬಾಳಿದವರ ನಿಜ ಜೀವನದ ಕಥೆ'. ಕಾದಂಬರಿಯುದ್ದಕ್ಕೂ ಕೃಷ್ಣೆಯಂತೆ ಹರಿಯುವ ಚಲನಶೀಲತೆಯುಳ್ಳ ಮಹಿಳೆಯರ ಪಾತ್ರಗಳು ಕಂಡುಬರುತ್ತವೆ. ಕೃಷ್ಣಾ ಹೊಳೆಯಂತೆ ಹರಿಯುವ ಶಕ್ತಿ ಮಹಿಳೆಯರಿಗೆ ಇದೆ. ಯುವ ವಿಮರ್ಶಕ ಸಿ. ಎಸ್. ಭೀಮರಾಯ ಗುರುತಿಸಿರುವಂತೆ "ಬದುಕು ಅಷ್ಟೇ ನಿಲ್ಲದೆ ಹರಿಯಬೇಕು. ಏನೇ ಬಂದರೂ ಈಸಬೇಕು, ಈಸಿ ಬದುಕಬೇಕು, ಮುಂದೆ ಸಾಗಬೇಕು. ಬದುಕಿನ ಪ್ರೀತಿಯನ್ನು ಬೆಳೆಸಿಕೊಂಡು ಬದುಕಬೇಕು." (ಸಿ.ಎಸ್. ಭೀಮರಾಯ : ಕಾದಂಬರಿಯ ಕುರಿತು ವಿಮರ್ಶೆ, ಬುಕ್ ಬ್ರಹ್ಮ ಅಂತರ್ಜಾಲದಿಂದ) ಸಾಮಾನ್ಯವಾಗಿ ಭಾರತೀಯ ನದಿಗಳನ್ನು ಹೆಣ್ಣಿನ ರೂಪದಲ್ಲಿ ಕಂಡಿರುವುದಕ್ಕೆ ಕೃಷ್ಣಾ ನದಿ ನಮಗೆ ಸಾಕ್ಷಿಯಾಗಿದೆ. ಏನೆಲ್ಲವನ್ನು ತನ್ನ ಒಡಲೊಳಗೆ ಅಡಗಿಸಿಕೊಂಡು ಕಾಲಮಾನಗಳಿಗೆ ಅನುಸಾರವಾಗಿ ರೂಪ ಬದಲಿಸಿಕೊಂಡರೂ ತಣ್ಣಗೆ ಹರಿಯುವ ಚಲನಶೀಲ ಗುಣವನ್ನು ನದಿ ಪಡೆದು ಕೊಂಡಿರುವಂತೆ ಈ ಪ್ರಕೃತಿಯ ಮೇಲೆ ಜೀವಿಸುವ ಹೆಣ್ಣು ಸದಾ ಚಲನಶೀಲಳಾಗಿರುವಂತೆ ಸ್ಪಷ್ಟವಾಗಿ ಕಾಣುತ್ತದೆ.

**ಪರಾಮಾರ್ಶನ ಗ್ರಂಥಗಳು :**

1. ಡಾ. ಬಾಳಾಸಾಬ ಲೋಕಾಪುರ : ಕೃಷ್ಣೆ ಹರಿದಳು, ಕಣ್ವ ಪ್ರಕಾಶನ, ಬೆಂಗಳೂರು– 2016
2. ಡಾ. ಎಚ್. ಎಸ್. ಶ್ರೀಮತಿ (ಸಂ) : ಮಹಿಳಾ ಅಧ್ಯಯನ ದಕ್ಷಿಣಾಯನ ಸಂಚಿಕೆ ಜುಲೈ– 2000
3. ಡಾ. ಶಿವಾನಂದ ವಿರಕ್ತಮಠ : ಮಹಿಳೆ ಮತ್ತು ಧರ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– 2018
4. ಪಟ್ಟಾಭಿ ಆರ್ಯಾಂಬ : ಮಹಿಳೆ : ಒಂದು ಅಧ್ಯಯನ, ಸಾಯಿಗೀತಾ, ಪ್ರಕಾಶನ, ಮೈಸೂರು–1998
5. ಸುನೀತಾ ಶೆಟ್ಟಿ : ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ, ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ–2000
6. ಬುಕ್ ಬ್ರಹ್ಮ : ಅಂತರ್ಜಾಲ

ಸಂಪರ್ಕ ವಿಳಾಸ :

ಡಾ. ಶಿವಲಿಂಗಪ್ಪ ಆಯ್. ಭಂಡಾರಿ

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ

ಜಿ. ಪಿ. ಪೋರವಾಲ ಕಲಾ, ವಾಣಿಜ್ಯ ಹಾಗೂ ವಿ. ವಿ. ಎಸ್. ವಿಜ್ಞಾನ ಮಹಾವಿದ್ಯಾಲಯ,

ಸಿಂದಗಿ ಜಿಲ್ಲೆ : ವಿಜಯಪುರ

ಮೊ. ನಂ. 9481538307

ಇ–ಒಚಿಟ : ಞುಚಿಟಜಚಿಡ್ಞುತಚಿಟುಟಿರಚಿಠಿಠಿಚಿ3110@ರಟಚಿಟ.ಛಿಠಟ

# ISARA INSTITUTE OF MANAGEMENT & PROFESSIONAL STUDIES




RSEARCH GATEWAY







AROGYAM ONLINE

# PARIVARTAN PSYCHOLOGY CENTER






**भारतीय भाषा, शिक्षा, साहित्य एवं शोध**

**ISSN 2321 – 9726**

**WWW.BHARTIYASHODH.COM**

**INTERNATIONAL RESEARCH JOURNAL OF MANAGEMENT SCIENCE & TECHNOLOGY**

**ISSN – 2250 – 1959 (0) 2348 – 9367 (P)**

**WWW.IRJMST.COM**

**INTERNATIONAL RESEARCH JOURNAL OF COMMERCE, ARTS AND SCIENCE**

**ISSN 2319 – 9202**

**WWW.CASIRJ.COM**

**INTERNATIONAL RESEARCH JOURNAL OF MANAGEMENT SOCIOLOGY & HUMANITIES**

**ISSN 2277 – 9809 (0) 2348 - 9359 (P)**

**WWW.IRJMSH.COM**

**INTERNATIONAL RESEARCH JOURNAL OF SCIENCE ENGINEERING AND TECHNOLOGY**

**ISSN 2454-3195 (online)**

**WWW.RJSET.COM**

**INTEGRATED RESEARCH JOURNAL OF MANAGEMENT, SCIENCE AND INNOVATION**

**ISSN 2582-5445**

**WWW.IRJMSI.COM**

**JOURNAL OF LEGAL STUDIES,POLITICS AND ECONOMICS RESEARCH**

**WWW.JLPER.COM**